## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.1947/2023

| | | |
|---|---|---|
| ಸಾಕ್ಷಿದಾರರ ಹೆಸರು | : ಆದರ್ಶ್ ಎಂ.ಎಸ್. | ಫ್ರಾಸಾ-11 |
| ತಂದೆಯ ಹೆಸರು | : ಸ್ವಾಮಿಗೌಡ | ಚಾಸಾ-18 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿಎಸ್ಐ | ದಿನಾಂಕಃ15.07.2025. |
| ವಾಸಸ್ಥಳ | : ಕಡೂರು ಪಿಟಿಎಸ್. | |

### :ಮುಖ್ಯ ವಿಚಾರಣೆಃ ಫ್ರಾಬ್ಲ್ಯಾ.ಸ.ಸ.ಅ. ರವರಿಂದ:

ನಾನು ದಿ.04.06.2022 ರಿಂದ 31.01.2024 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.12.08.2023 ರಂದು ಸ.4.00 ಗಂಟೆ ಸಮಯಕ್ಕೆ ನಾನು ಠಾಣೆಯಲ್ಲಿ ಇರುವಾಗ ಠಾಣಾ ಹೆಚ್.ಸಿ. ತೇಜವ್ ಮೂರ್ತಿ ರವರು ಚಾಸಾ-1 ರವರ ದೂರು ಹೇಳಿಕೆಯನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು ಠಾಣೆಯಲ್ಲಿ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಠಾ.ಮೊ.ಸಂ.106/2023 ರಂತೆ ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ-19 ರವರ ನಿರ್ದೇಶನದಂತೆ ಅದೇದಿನ ರಾ.9.00 ಗಂಟೆಗೆ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಬೇಟಿ ನೀಡಿ ಅಲ್ಲಿ ಚಾಸಾ-7 ಮತ್ತು 8 ರವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡು ಚಾಸಾ-4 ರಿಂದ 6 ರವರ ಸಮಕ್ಷಮ ಮೃತ ನಿರಂಜನ್ ಹಿರೇಮಠ್ ರವರ ಶವಪಂಚನಾಮೆಯನ್ನು ಬೆ.9.15 ರಿಂದ 11.45 ರವರೆಗೂ ಜರುಗಿಸಿ ಪೋಟೋಗಳನ್ನು ತೆಗೆಸಿರುತ್ತೇನೆ. ನಂತರ ಮೃತ ದೇಹವನ್ನು ಶಪಪರೀಕ್ಷೆಗೆಂದು ಠಾಣಾ ಸಿಬ್ಬಂದಿ ಮಲ್ಲಿಕಾರ್ಜುನ್ ರವರ ಹಸ್ತ ಕಳುಹಿಸಿಕೊಟ್ಟಿರುತ್ತೇನೆ. ಆ ದಿನ ಚಾಸಾ-5 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-19 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ಪ್ರ.ವ.ವರದಿ, ಶವತನಿಖಾ ವರದಿ, ಶವಪಂಚನಾಮೆ ಮತ್ತು 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-21 ರಿಂದ 25, ಸಾಕ್ಷಿಯ ಸಹಿಗಳನ್ನು ನಿಪಿ-21(ಎ) ರಿಂದ 23(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರ ದೂರು ಹೇಳಿಕೆಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

### ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ

ಇಲಾಖಾ ಅಂಕಿಅಂಶಕ್ಕೋಸ್ಕರ ನಿಪಿ-1 ರ ಹೇಳಿಕೆಯನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಗುರುತಿಸಿರುವ ದಾಖಲೆಗಳಿಗೂ ಹಾಗೂ ನ್ಯಾಯಾಲಯದ ಮುಂದೆ ಇರುವ ಆರೋಪಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

<u>**ಮರು ವಿಚಾರಣೆ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಮೂಡಿಗೆರೆ.